ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಸಂಡೂರು.

**OS. No. 119/2021** **P.W. 01**

ದಿನಾಂಕ **02-06-2023** ರಂದು ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು ಶ್ರೀ ಎನ್ ಎಂ ಎನ್ ವಕೀಲರಿಂದ**

* * * *

ದಾವಾ ಸ್ವತ್ತನ್ನು 2016 ರಲ್ಲಿ ಖರೀದಿ ಮಾಡಿರುತ್ತೇನೆ. ಖರೀದಿ ಕರಾರನ್ನು ಯಾವಾಗ ಮಾಡಿರುತ್ತೇವೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ದಾವಾ ಸ್ವತ್ತಿನಲ್ಲಿ ಹುಣಸೆ ಮರ ಇರುತ್ತದೆ. ಸದರಿ ಮರಗಳ ಬಗ್ಗೆ ಕರಾರು ಪತ್ರ ಆಗಿರುತ್ತದೆ. ದಿಃ 01-02-2021 ರಲ್ಲಿ ದಾವಾ ಸ್ವತ್ತಿಲ್ಲಿರುವ ಹುಣಸೆ ಮರಗಳಿಗೆ ಸಂಬಂದಪಟ್ಟಂತೆ ಕರಾರು ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಕರಾರು ಪತ್ರದಂತೆ ಪ್ರತಿವಾದಿಗೆ 3 ಮತ್ತು ನಮಗೆ 6 ಹುಣಸೆ ಮರ ಬಂದಿರುತ್ತವೆ. ಸದರಿ ಕರಾರು ಪತ್ರದ ಪ್ರಕಾರ 3 ಹುಣಸೆ ಮರಗಳ ಸ್ವಾಧೀನತೆಯನ್ನು ಬಿಟ್ಟು ಕೊಟ್ಟಿರುತ್ತೇನೆ. ಸದರಿ 3 ಹುಣಸೆ ಮರಗಳನ್ನು ಪಡೆದುಕೊಳ್ಳಲು ಪ್ರತಿವಾದಿಯ ವಿರುದ್ದ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಸರ್ವೆ ಮಾಡಿಸುವಾಗ ಪ್ರತಿವಾದಿಗೆ ನೋಟಿಸನ್ನು ನೀಡಲಾಗಿತ್ತು. ನೋಟಿಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಕಾರಣ ಸದರಿ ನೋಟಿಸ ನ್ನು ಸರ್ವೆಯರ್ ನೀಡಿರುತ್ತಾರೆ. ನಿಪಿ 3 ನ್ನು ನಾವೇ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಒತ್ತುವರಿ ಮಾಡಿರುವ ಬಗ್ಗೆ ಸಂಬಂದಪಟ್ಟಂತೆ ಪಂಚನಾಮೆ ಮತ್ತು ಇತರೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಕಿರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿ ನಮ್ಮ ಅಳತೆಯ ಕಲ್ಲನ್ನು ಕಿತ್ತಕಾರಣ ಈ ದಾವೆಯನ್ನು ಹೂಡಿರುತ್ತೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ಒತ್ತುವರಿ ಮಾಡಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

ಒಟ್ಟು 2 ಎಕರೆ 89 ಸೆಂಟ್ಸನಲ್ಲಿ ನನಗೆ ಪ್ರತಿವಾದಿ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಖರೀದಿ ಮಾಡಿದ ದಿನದಿಂದ ನಾವೇ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿ. ಉಳಿದ 2 ಎಕರೆ 63 ಸೆಂಟ್ಸ ನಲ್ಲಿ ಪ್ರತಿವಾದಿಯು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಯಾವುದೆ ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಸರಿನಲ್ಲಿ ಇರುವ ಹುಣಸೆ ಮರಗಳನ್ನು

ಕಂಬಳಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಪ್ರತಿವಾದಿ ಒತ್ತುವರಿ ಮಾಡಿರುತ್ತಾರೆ. ಪ್ರತಿವಾದಿಯು ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

**ಪ್ರ.ದ.ನ್ಯಾ.ದಂ., ಸಂಡೂರು.**